# ಗಿನ್ನೆಸ್ ಏರಿದ ಕತ್ತೆ!

ಈ ಕತ್ತೆಯ ಹೆಸರು ರೋಮಲಸ್. ಇದು ತನ್ನ ಎತ್ತರದ ಬೆಳವಣಿಗೆಯಿಂದಾಗಿ ವಿಶ್ವ ದಾಖಲೆಯನ್ನು ನಿರ್ಮಿಸಿದೆ. 5 ಅಡಿ 8 ಅಂಗುಲ ಎತ್ತರದ ಈ ಕತ್ತೆ ಇತ್ತೀಚೆಗೆ ಗಿನ್ನೆಸ್ ವಿಶ್ವ ದಾಖಲೆಯ ಪುಸ್ತಕದಲ್ಲಿ ಸೇರಿದೆ. ಇದಕ್ಕೂ ಮೊದಲು ಅಲ್ಲಿ ಪ್ರವೇಶ ಪಡೆದ 5 ಅಡಿ 6 ಅಂಗುಲ ಎತ್ತರದ ಓಕಾಹೊಮಾ ಸ್ಯಾಮ ಎಂಬ ಕತ್ತೆ ಎರಡನೇ ಸ್ಥಾನಕ್ಕಿಳಿದು, ವಿಶ್ವ ದಾಖಲೆಯಿಂದ ಹಿಂದೆ ಸರಿದಿದೆ.

ಅವಳಿ ಜವಳಿಯಾಗಿ ಹುಟ್ಟಿದ ಎರಡು ಕತ್ತೆಗಳನ್ನು ಫಿಲ್ ಹಾಗೂ ಕಾರಾ ಎಲ್ಲೋಟ ಎಂಬ ದಂಪತಿ ಬಹಳ ಹಿಂದೆಯೇ ಖರೀದಿಸಿದ್ದರು. ಈಗ ದಾಖಲೆ ನಿರ್ಮಿಸಿದ ರೋಮಲಸ್ ಎಂಬ ಕತ್ತೆ ತೀರ ಕಡಿಮೆ ತೂಕ ಹೊಂದಿದ್ದು ತನ್ನ ಜೊತೆಗೆ ಹುಟ್ಟಿದ ರೆಮಸ್‌ಗಿಂತ ಅಶಕ್ತವಾಗಿತ್ತು. ದಿನಗಳೆದಂತೆ ತನ್ನ ತೂಕ ಹೆಚ್ಚಿಸಿಕೊಂಡು, ರೆಮಸ್‌ನನ್ನು ಹಿಂದಿಕ್ಕಿ, ಅದು ಹೇಗೆ ಇಷ್ಟು ಎತ್ತರಕ್ಕೆ ಬೆಳೆಯಿತೋ ಎಂದು ಎಲ್ಲೋಟ ದಂಪತಿ ಆಶ್ಚರ್ಯ ವ್ಯಕ್ತಪಡಿಸುತ್ತಾರೆ. ಒಂದು ಅಭಿಪ್ರಾಯದಂತೆ ಇದು ಶುದ್ಧ ಕತ್ತೆ ಅಲ್ಲ. ಕುದುರೆ–ಕತ್ತೆಗಳ ಕೂಡುವಿಕೆಯಿಂದ ಇದು ಹುಟ್ಟಿರಬಹುದು ಎನ್ನುತ್ತಾರೆ. ಅತಿ ಎತ್ತರ ಎನ್ನುವುದನ್ನು ಬಿಟ್ಟರೆ ಕುದುರೆಯ ಯಾವ ಲಕ್ಷಣವೂ ಈ ಕತ್ತೆಯಲ್ಲಿ ಇಲ್ಲ. ಇದರೊಂದಿಗೆ ಹುಟ್ಟಿದ ಇನ್ನೊಂದು ಕತ್ತೆ ಎತ್ತರದಲ್ಲೂ ಕತ್ತೆಯೇ!

ಎಲ್ಲೋಟ ದಂಪತಿ ಕುದುರೆ, ಆಕಳು ಮುಂತಾದ ಪ್ರಾಣಿಗಳನ್ನು ಸಾಕಿಕೊಂಡಿದ್ದಾರೆ. ಸುತ್ತಮುತ್ತ ಇದ್ದ ಮಂಗಗಳು ಆ ಪ್ರಾಣಿಗಳಿಗೆ ಆಗಾಗ ಕೀಟಲೆ ಕೊಡುತ್ತಿದ್ದವು. ಮಂಗಗಳ ಕೀಟಲೆಯಿಂದ ರಕ್ಷಣೆ ನೀಡಲು ಈ ಕತ್ತೆಗಳನ್ನು ಆ ದಂಪತಿ ಬಳಸಿ ಕೊಳ್ಳುತ್ತಿದ್ದರು. ಈ ಕತ್ತೆಗಳೂ ತಮಗೆ ವಹಿಸಿದ ಕೆಲಸವನ್ನು ಶ್ರದ್ಧೆಯಿಂದಲೇ ಮಾಡುತ್ತಿದ್ದವು. ಅದರ ಜೊತೆಗೆ ರೋಮಲಸ್ ಕತ್ತೆ ಅತಿ ಎತ್ತರಕ್ಕೆ ಬೆಳೆದು ತನ್ನೊಂದಿಗೆ ಈ ದಂಪತಿಯ ಹೆಸರನ್ನು ಜಗತ್ತಿಗೆ ಸಾರಿ ಬಿಟ್ಟಿತು.

ಅಮೆರಿಕಾ ದೇಶದ ಎರಡನೇ ದೊಡ್ಡ ರಾಜ್ಯ ಟೆಕ್ಸಾಸ್. ಇಲ್ಲಿನ ವಾಕ್ಸಾಹಕೀ ಪಟ್ಟಣದಲ್ಲಿರುವುದೇ ಜಗತ್ತಿನ ಅತಿ ಎತ್ತರದ ಕತ್ತೆ. ಈ ಕತ್ತೆಗೀಗ ಎಲ್ಲಿಲ್ಲದ ಮಹತ್ವ. ಇದು ಹಾಜರಾಗಬೇಕಾದ ಕಾರ್ಯಕ್ರಮಗಳ ಪಟ್ಟಿ ದಿನದಿಂದ ದಿನಕ್ಕೆ ಬೆಳೆಯತ್ತಲೇ ಇದೆ. ಸಾಧು ಸ್ವಭಾವದ ಈ ದೈತ್ಯ ಕತ್ತೆಗೀಗ ವಿಐಪಿ ಸ್ಥಾನಮಾನ!

■ ಸುಭಾಸ ಯಾದವಾಡ





